## ನನ್ನ ಓದು

ಬೀಳಿಸಿರುವ, ಉದ್ಯೋಗಸ್ಥರಾಗಿರುವ, ಗೃಹಿಣಿಯಾಗಿ ಬಂಧಿಯಾಗಿರುವ ಹೆಣ್ಣುಗಳ ಲೋಕದಿಂದ ರೂಪುಗೊಂಡಿದ್ದು. ಮಹಿಳೆ ಅನೇಕ ಪಾತ್ರಗಳನ್ನು ಧರಿಸಲೇಬೇಕಾದ ಒತ್ತಡವನ್ನು ಪ್ರತಿಕ್ಷಣವೂ ಈ ಸಮಾಜ ಹೇರುತ್ತಲೇ ಇದೆ. ಹಾಗೆಯೇ ಬಿಡುಗಡೆಯ ದಾರಿಗಳನ್ನು, ಪ್ರತಿರೋಧದ ಶಕ್ತಿಯನ್ನು ತನ್ನೊಳಗೆ ಧಾತುವಾಗಿಯೂ ಧರಿಸಿದ್ದಾಳೆ. ಈ ಎರಡರ ಮುಖಾಮುಖಿ ಸಂಘರ್ಷಗಳು ಇವರ ಕಥೆಗಳಲ್ಲಿ ಪ್ರಮುಖ ಕೇಂದ್ರವಾಗಿ ಅಭಿವ್ಯಕ್ತಿಯಾಗಿದೆ.

ಹುಟ್ಟಿನಿಂದ ಮಹಿಳೆಯಾದ ಕಾರಣಕ್ಕೆ, ಹುಟ್ಟಿನಿಂದ ದಲಿತನಾದ ಕಾರಣಕ್ಕೆ ಆಯಾ ಸ್ವರೂಪದ ಬರಹವನ್ನೇ ಮಾಡಬೇಕೆಂಬ ಬಾಹ್ಯ ಒತ್ತಡವಿದೆ. ಆ ತರಹದ ನಿಲುವುಗಳನ್ನು ವಿಮರ್ಶಕರೆನಿಸಿಕೊಂಡವರು ಭೂತಗನ್ನಡಿಯಿಂದ ಹುಡುಕುತ್ತಿದ್ದರು. ಅಂಥ ಕನ್ನಡಿಗೆ ಜಾಹ್ನವಿಯವರ ಕಥೆಗಳು ದಕ್ಕುವುದಿಲ್ಲ. ಈ ಕಾರಣದಿಂದಲೇ ಇರಬೇಕು, ಜಾಹ್ನವಿಯವರ ಕಥೆಗಳ ಬಗ್ಗೆ ವಿಮರ್ಶಾವಲಯದಲ್ಲಿ ಸಾಕಷ್ಟು ಚರ್ಚೆಯೇ ನಡೆದಿಲ್ಲ. ಓದಿನ ರಾಜಕಾರಣ ಜಾಹ್ನವಿಯವರ ಬರಹಗಳನ್ನು ನುಂಗಿಹಾಕಿದೆ. ಹೊರಗಿನ ಹತಾರಗಳ ಮೂಲಕ ಹಾಯುವ ವಿಮರ್ಶೆ ಮತ್ತು ಸಾಹಿತ್ಯಕ ಗುಂಪುಗಾರಿಕೆಗಳು ವ್ಯವಸ್ಥಿತವಾಗಿ ಜಾಹ್ನವಿಯವರನ್ನು ಚರ್ಚೆಯಿಂದ ಹೊರಗಿಟ್ಟಿವೆ. ಹೀಗೆ ಹೊರಗುಳಿದವರ ಚರಿತ್ರೆಯೂ ದೊಡ್ಡದಿದೆ.

ಆರಂಭದಲ್ಲಿ ಮಹಿಳಾಚಿಂತನೆಯೆನ್ನುವುದು ಪುರುಷರು ಮತ್ತು ಪುರುಷರ ದೌರ್ಜನ್ಯವನ್ನು ನೇರವಾಗಿ ಬರೆಯಲೇಬೇಕು ಎಂಬ ನಿಲುವಿನಲ್ಲಿತ್ತು. ಈ ಒತ್ತಡದಿಂದ ಕಪ್ಪ-ಬಿಳುಪು ಮಾದರಿಯ ಚಿತ್ರಗಳು ಹರಿದಾಡಿದವು. ಜಾಹ್ನವಿಯವರು ಬರಹ ಆರಂಭಿಸಿದ ಕಾಲದಲ್ಲಿ ಅದು ಅತಿ ಎನ್ನುವ ರೀತಿಯಲ್ಲಿತ್ತು. ಫೆಮಿನಿಸಂ ಅನ್ನು ಕಟ್ಟುವ ಧಾವಂತದಲ್ಲಿ ಪುರುಷನನ್ನೇ ನೇರ ಗುರಿಯಾಗಿಸಿಕೊಳ್ಳುವ ಉಮೇದನ್ನು ತೋರಿಸುತ್ತಿತ್ತು. 1987ರಲ್ಲಿ ಜಾಹ್ನವಿಯರ ಮೊದಲ ಕಥೆ 'ವ್ಯಭಿಚಾರ' ಪ್ರಕಟವಾದಾಗ, ಆಗ ಚರ್ಚಿಸುತ್ತಿದ್ದ ಸ್ತ್ರೀವಾದಿ ಚಿಂತನೆಗಳು ಬುಡಮೇಲಾದವು. ಸಿದ್ಧಮಾದರಿಯ ಚಿಂತನೆಗೆ ಈ ಕಥೆ ದೊಡ್ಡ ಪೆಟ್ಟನ್ನೇ ಕೊಟ್ಟಿತು. ಈ ಕಥೆಯ ಮೂಲಕ ಸ್ತ್ರೀವಾದವು ಬಹುಮುಖ್ಯ ಚರ್ಚೆಯನ್ನು ಹುಟ್ಟು ಹಾಕಬೇಕಿತ್ತು. ಆದರೆ ಯಾಕೆ ಆ ಕಥೆ ಬದಿಗೆ ಸರಿಯಿತೋ? ಇಡೀ ಕಥೆ ಸಾಂಪ್ರದಾಯಿಕ ಮಹಿಳಾನಲೆಗಳನ್ನು ಪ್ರಶ್ನಿಸುತ್ತದೆ, ಮಹಿಳಾಸಾಹಿತ್ಯ ಆವಾಹಿಸಿಕೊಂಡ ಅಮೃತಮತಿಪ್ರಜ್ಞೆಯನ್ನು ವಿಭಿನ್ನವಾಗಿ ಎದುರುಗೊಳ್ಳುತ್ತದೆ. ವ್ಯಭಿಚಾರ, ಅನೈತಿಕ, ಪರಿಕಲ್ಪನೆಗಳನ್ನು ವಾಸ್ತವಿಕ ನೆಲೆಗಟ್ಟಿನಲ್ಲಿ ಮಂಡಿಸುತ್ತದೆ.

'ವ್ಯಭಿಚಾರ' ಕಥೆಯಲ್ಲಿನ ಲೀಲಕ್ಕನ ಪಾತ್ರ ಕನ್ನಡ ಕಥನಲೋಕದೊಳಗೆ ಹೊಸದು. ಅದರ ಮುಂದುವರಿದ ಭಾಗವಾಗಿ ಅದೇ ಕಥೆಯ ಸವಿ ಕಾಣುತ್ತಾಳೆ. ಆದರೆ ಲೀಲಕ್ಕನಷ್ಟು ಸವಿ ಮುಕ್ತಳಲ್ಲ. ಸಾಂಪ್ರದಾಯಿಕ ಗೆರೆಗಳನ್ನು ದಾಟಲು ಶಕ್ತಳಲ್ಲ. ಅದಕ್ಕೇ ಸವಿ 'ಅಷ್ಟೊಂದು ಧೈರ್ಯವಿದ್ದರೆ ಲೀಲಕ್ಕನಂತೆ ರಾಜಾರೋಷವಾಗಿ ಬದುಕುತ್ತಿದ್ದೆ' ಎನ್ನುತ್ತಾಳೆ. ಇದೇ ಪ್ರಶ್ನೆಗಳನ್ನು ಮುಂದಿನ ಕಥೆಗಳಾದ (ರಚನೆಯ ಕಾಲದ ದೃಷ್ಟಿಯಿಂದ) 'ದೇವರ್ ಬಂದಾವ್ ಬನ್ನಿರೋ', 'ವಿಮುಖ', 'ಒಳಗುದಿ', 'ನೆಪ', 'ಹುಡುಕಾಟ', 'ಬಸವಿ', 'ಅನಿವಾರ್ಯ', 'ಹುಯ್ಯೋ ಹುಯ್ಯೋ ಮಳೆರಾಯ', 'ಆಸರೆ', 'ಅಜ್ಞಾತ' ಇನ್ನಷ್ಟು ಸ್ಪಷ್ಟವಾಗಿ ಮುಂದಿಡುತ್ತವೆ. ಗಂಡ, ಕುಟುಂಬ, ಲೈಂಗಿಕ ಸುಖ, ಪಾವಿತ್ರ್ಯದ ಕಲ್ಪನೆಗಳನ್ನು ಒಡೆದು, ಹೆಣ್ಣಿನ ಅಸ್ಮಿತೆ ಕೇವಲ ಲೈಂಗಿಕತೆ, ದೇಹ ಹಂಚಿಕೊಳ್ಳುವಿಕೆಯಲ್ಲಿ ಇರುವುದಿಲ್ಲ; ಅದೊಂದು ಆಧ್ಯಾತ್ಮಿಕ ಅನುಭೂತಿ, ಪ್ರೀತಿಯ ಅನಂತತೆ ಎಂಬುದನ್ನು ಶೋಧಿಸಲೆತ್ನಿಸುತ್ತವೆ. ಸಮಾಜ ಒಪ್ಪಿಸಿದ ಪ್ರೀತಿ, ಕಾಮಗಳಷ್ಟೇ ಮಹಿಳೆಯ ಮುಖವಲ್ಲ. ಅವಳ ಕಾಣುವ, ಕಟ್ಟಿಕೊಳ್ಳುವ ಲೋಕಜಗತ್ತು ಬೇರೆಯದೇ ಆಗಿದೆ. ಅದು ತರತಮಗಳಿಲ್ಲದ, ಭವಬಂಧನಗಳಿಲ್ಲದ ನಿರ್ದಿಗಂತರೂಪಿಯಾದುದು. 'ಒಂದು ಹೆಣ್ಣು, ಗಂಡಿಗೆ ಏಕಾಂತದಲ್ಲಿ ಅದು ಬಿಟ್ಟರೆ ಬೇರೇನೂ ಇರುವುದಿಲ್ವಾ?' ಎಂಬ ಪ್ರಶ್ನೆ ಸವಿ ಕೇವಲ ಸುಜಿಗೆ ಕೇಳಿದ್ದಲ್ಲ, ತನ್ನೆದುರಿಗಿನ ಸಮಾಜಕ್ಕೆ ಕೇಳಿದ್ದು. ಆದರೆ ಸಮಾಜ ಈ ಪ್ರಶ್ನೆಯನ್ನು ಅಷ್ಟು ಸುಲಭವಾಗಿ ಜೀರ್ಣಿಸಿಕೊಳ್ಳಲಾಗುವುದಿಲ್ಲ.

ಮಹಿಳಾ ಸಾಹಿತ್ಯ ಮುಖ್ಯವಾಗಿ ಮುಖಾಮುಖಿಯಾಗುವ ಪಾವಿತ್ರ್ಯ, ಹಾದರ, ವಿವಾಹೇತರ ಪ್ರಶ್ನೆಗಳನ್ನು ಇನ್ನೊಂದು ಕ್ರಮದಲ್ಲಿ ಎದುರುಗೊಳ್ಳುತ್ತದೆ. ಈ ಸಂಕಲನದಲ್ಲಿರುವ ಬಹು